ಟಿ.ಪಿ.ಸಿ. ಅಕ್ಕಾಯ ಕರಣಿಕರ ರದ್ದು ಪದ್ಧತಿ

೮೭. ಶ್ರೀ ಮಲ್ಲಿಕಾರ್ಜುನ ವಿ. ಬನ್ನಿ(ಗುಳೇದ್‌ಗುಡ್ಡ).—ಮಾನ್ಯ ಗ್ರಾಮೀಣ ಅಭಿವೃದ್ಧಿ ಹಾಗೂ ಪಂಚಾಯತ್‌ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ:—

(ಅ) ಕರ್ನಾಟಕದಲ್ಲಿ ೧೯೭೯ರಿಂದ ಅಕ್ಕಾಯಿ ರದ್ದತಿ ಆದನಂತರವೂ ಇನ್ನೂ ಕೆಲವೆಡೆ ತಾಲ್ಲೂಕು ಪಂಚಾಯತಿ ಸಮಿತಿ ಟಿ. ಪಿ. ಸಿ. ಯ ಅಕ್ಕಾಯಿ ಗುಮಾಸ್ತರು ಇದ್ದು ೩೧ನೇ ಮಾರ್ಚ್ ೧೯೮೩ಕ್ಕೆ ಅವರನ್ನು ಕೆಲಸದಿಂದ ವಜಾ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

(ಆ) ಹಾಗಿದ್ದಲ್ಲಿ ಅವರ ಸಂಖ್ಯೆ ಎಷ್ಟು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

(ಅ) ಬಂದಿದೆ.

(ಆ) ಒಟ್ಟು ೪೪.

ಕನಕಪುರ ತಾಲ್ಲೂಕಿನಲ್ಲಿ ಕೊಳವೆ ಬಾವಿಗಳನ್ನು ಹಾಕಿರುವ ಬಗ್ಗೆ

೧೮೩. ಶ್ರೀ ಹೆಗ್ಗಪ್ಪ ಲಮಾಣಿ (ಬ್ಯಾಡಗಿ).—ಮಾನ್ಯ ಗ್ರಾಮೀಣ ಹಾಗೂ ಪಂಚಾಯತ್‌ರಾಜ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ೧೦-೧-೮೩ ರಿಂದ ಇಲ್ಲಿಯವರೆಗೆ ಕನಕಪುರ ತಾಲ್ಲೂಕಿನಲ್ಲಿ ಎಷ್ಟು ಕೊಳವೆ ಬಾವಿಗಳನ್ನು ತೋಡಲಾಗಿದೆ ?

ಆ) ಎಲ್ಲಾ ಲಂಬಾಣಿ ತಾಂಡಾಗಳಲ್ಲಿ ಕೊಳವೆ ಬಾವಿಗಳನ್ನು ತೋಡಲಾಗಿದೆಯೇ?

ಇ) ಹಾಗಿಲ್ಲದಿದ್ದಲ್ಲಿ ಕಾರಣಗಳೇನು ?

ಈ) ಇನ್ನು ಎಷ್ಟು ಕಾಲದಲ್ಲಿ ಇಲ್ಲಿ ಕೊಳವೆ ಬಾವಿಗಳನ್ನು ತೋಡಲಾಗುವುದು ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು).—

ಅ) ತಾ. ೧೦-೧-೮೩ ರಿಂದ ೨೦-೮-೮೩ರ ವರೆಗೆ ಕನಕಪುರ ತಾಲ್ಲೂಕಿನ ಆರು ಹೋಬಳಿಗಳಲ್ಲಿ ಒಟ್ಟು ೩೩೩ ಕೊಳವೆ ಬಾವಿಗಳನ್ನು ತೋಡಲಾಗಿದ್ದು ಅವುಗಳ ಪೈಕಿ ೨೭೪ ಕೊಳವೆ ಬಾವಿಗಳು ಯಶಸ್ವಿಯಾಗಿವೆ.

ಆ) ಕನಕಪುರ ತಾಲ್ಲೂಕಿನಲ್ಲಿರುವ ೪೨ ಲಂಬಾಣಿ ತಾಂಡಗಳ ಪೈಕಿ ೩೫ ಲಂಬಾಣಿ ತಾಂಡಗಳಲ್ಲಿ ಕೊಳವೆ ಬಾವಿಗಳನ್ನು ತೋಡಲಾಗಿದೆ. ಇನ್ನು ೭ ಲಂಬಾಣಿ ತಾಂಡಗಳಲ್ಲಿ ಕೊಳವೆ ಬಾವಿಗಳನ್ನು ತೋಡಬೇಕಾಗಿದೆ.

ಇ) ಉಳಿದ ೭ ಲಂಬಾಣಿ ತಾಂಡಗಳಿಗೆ ಜಿಲ್ಲಾಧಿಕಾರಿಗಳ ಅನುಮೋದನೆ ಪಡೆದ ನಂತರ ಕೊಳವೆ ಬಾವಿಗಳನ್ನು ತೋಡಲಾಗುವುದು.

ಈ) ಉಳಿದ ೭ ಲಂಬಾಣಿ ತಾಂಡಗಳಲ್ಲಿ ಚಾಲ್ತಿ ಸಾಲಿನಲ್ಲಿ (೧೯೮೩-೮೪) ಕೊಳವೆ ಬಾವಿಗಳನ್ನು ತೋಡಲು ಪ್ರಯತ್ನಿಸುತ್ತಿದೆ.